# ಅಂತರಾಳ

**– ಮುದ್ದಣ**

**ಹೊಸಗನ್ನಡ ರೂಪ**

**ಈ ರೀತಿಯಾಗಿ ಬಂದೊದಗಿದ ಚಳಿಗಾಲದಲ್ಲಿ ಶ್ರೀರಾಮನ (ರಾಘವನ) ಯಜ್ಞದ ಕುದುರೆಯು ಅರಣ್ಯಕನೆಂಬ ಒಬ್ಬ ಋಷಿಯ ಆಶ್ರಮವನ್ನು ಪ್ರವೇಶಿಸಿದ್ದನ್ನು ನೋಡಿ,ಶತ್ರುಘ್ನರಾದಿಯಾಗಿ ಎಲ್ಲರು (ಕುದುರೆಯ ಜೊತೆ ಬಂದಿದ್ದ ರಾಮನ ಸೈನ್ಯ) ಮುನಿಯ ದರ್ಶನಕ್ಕೆಂದು ಆಶ್ರಮವನ್ನು ಪ್ರವೇಶಿಸಿ ಮುನಿಗೆ ನಮಸ್ಕರಿಸಿದರು. ಆಗ ಅರಣ್ಯಕನು ಅಭ್ಯಾಗತರನ್ನು ಗೌರವಿಸಿ ,ಎಲ್ಲರನ್ನು ಆತಿಥ್ಯ ಕೊಟ್ಟು ಸತ್ಕರಿಸಿದನು. ಅವರೆಲ್ಲರೂ ಶ್ರೀರಾಮ ಸತ್ಕಥಾ ವಿನೋದ ಗೋಷ್ಠಿಯಲ್ಲಿ..........**

**ಮನೋರಮೆ : ಎನ್ನ ಚೆನ್ನಿಗ ! ಆತಿಥ್ಯಮೆಂದರೇನು ?ಕೇವಲ(ಬರಿಯ ) ಬಾಯುಪಚಾರವೆ?**

**ಮುದ್ದಣ : ಅಲ್ಲ ಅಲ್ಲ, ಬಾಯ ಉಪಚಾರವಲ್ಲ ಬಂದವರಿಗೆ ಕೈಗೆ ಕಾಲಿಗೆ ನೀರನ್ನು ಇತ್ತು ಕೂರಿಸಿ ಸವಿಯಾದ ಅನ್ನವನ್ನಿತ್ತು , ಹೂವಿನಿಂದ ಸಿಂಗರಿಸಿ ,ಗಂಧದಿಂದ ಅಲಂಕರಿಸಿ , ಜೊತೆಗಿದ್ದು ನುಡಿದು ನಡೆದು ಗೌರವಿಸುವುದು.**

**ಮನೋರಮೆ : ಅದಿರಲಿ, ಶತ್ರುಘ್ನನ ಸಾವಿರ ಸಾವಿರ ಲೆಕ್ಕವಿಲ್ಲದಷ್ಟು ಪಡೆಗೆ ಅರಣ್ಯಕನು ಅನ್ನ ನೀರನ್ನಿತ್ತು ಸತ್ಕರಿಸಿದನೆ ?**

**ಮುದ್ದಣ : ಹೌದು ,ಹೌದು. ಅವರೆಲ್ಲರನ್ನು ಯಥೇಚ್ಛ ಮೃಷ್ಟಾನ್ನ ಭೋಜನದಿಂದ ತಣಿಸಿದನು .**

**ಮನೋರಮೆ : ನನಗೆ ಇದು ಅಚ್ಚರಿ (ಆಶ್ಚರ್ಯದ ವಿಷಯ ) ಇದು ಹೇಗೆ ಸಾಧ್ಯವಾಯಿತು ?**

**ಮುದ್ದಣ : ಏನು? ಮನಿಗಳ ಜಪದ ತಪದ ಮಂತ್ರದ ಹಿರಿಮೆಯೇನು ಸಾಮಾನ್ಯವಾದುದೆ? ಬೇಡಿದ ದ್ರವ್ಯವನ್ನು ಕ್ಷಣಮಾತ್ರದಲ್ಲಿ ತಂದಿಡುವರು.**

**ಮನೋರಮೆ : ಹಾಗಿರುವುದೆ? ಒಳ್ಳೆಯದು ಯಾವುದು ಆ ಮಂತ್ರ ?**

**ಮುದ್ದಣ :ಅದುವೆ? ಏಕಾಕ್ಷರೀ ,ದ್ವಿ ಅಕ್ಷರೀ,ತ್ರಿ ಅಕ್ಷರೀ, ಚತುರಾಕ್ಷರೀ, ಪಂಚಾಕ್ಷರೀ, ಷಡಕ್ಷರೀ, ಮೊದಲಾದ ಪ್ರಸಿದ್ಧ ಮಂತ್ರಗಳಿವೆಯಲ್ಲವೇ?**

**ಮನೋರಮೆ :ಓಹೋ ! ಇಷ್ಟೊಂದು ಜಪದ ಶಕ್ತಿಯ ನೆರವಿನಿಂದ ತಪಸ್ವಿಗಳು ಇನ್ನು ಯಾವುದರ ಗೊಡವೆಯಿಲ್ಲದಂತೆ ಇರುವರು.**

**ಮುದ್ದಣ : ಹೌದು ಹೌದು : ತಪ್ಪೇನಿದೆ ?**

**ಮನೋರಮೆ : ಅದಿರಲಿ .ನಿಮ್ಮಂತಹ ಕವಿಗಳು ತಮ್ಮ ಸಂಸಾರದ ಬಗ್ಗೆ ಒಂದಿಷ್ಟು ಗಮನವಿಲ್ಲದೆ ಸುಮಸುಮ್ಮನೆ ಹಾಳು ಕತೆಯ ಕಾವ್ಯದ ಭ್ರಮೆಯಲ್ಲಿರುವಿರಿ.ಋಷಿಗಳಿಗೇನು ಬಟ್ಟೆಯೋ ?ಉಣ್ಣಲು ,ತಿನ್ನಲು ಯಾವುದರ ಅವಶ್ಯಕತೆಯೂ ಇಲ್ಲ. ನಿಮ್ಮಂತಹ ಕವಿಗಳು ಹಾಗಿರುವ ಒಂದು ಜಪದ ಉಪದೇಶವನ್ನು ಹಿರಿಯ ಋಷಿಗಳ ಸಹಾಯದಿಂದ ಪಡೆದುಕೊಂಡರಾಗದೇ ?**

**ಮುದ್ದಣ : (ಮುಗುಳ್ನಗೆಯಿಂದ ) ಏನು ? ನಮ್ಮ ಹಾಗಿರುವುದಕ್ಕೆ ನಗುವೆ ? ನಮ್ಮಂತಹ ಕವಿಗಳಿಗೇನು ಕೊರತೆಯೇ? ತಮ್ಮ ಒಂದು ನುಡಿಯ ಶಕ್ತಿಯಿಂದ ಮೂರು ಜಗವನ್ನು ನಾಶ ಮಾಡುವ ,ಹೊಗಳುವ, ತೆಗಳುವ , ಕೊಳ್ಳುವ,ಆಳುವ , ಅನುಭವಿಸುವ ,ನಾಶಪಡಿಸುವ ,ಹೂಳುವ, ಆಜ್ಞಾಪಿಸುವ, ಬಾಳಿಸುವ( ಉಳಿಸುವ ),ಭೂಷಣಪ್ರಾಯರಾದ ನಮ್ಮಂತಹ ಕವಿಗಳ ರೀತಿಯನ್ನು ನೀನು ಇನ್ನು ಅರಿತಿಲ್ಲ.**

mamatabhagwat1@gmail.com

ಮನೋರಮೆ : (ಆಶ್ಚರ್ಯಗೊಂಡು) ನಿಮ್ಮಂತಹ ಕವಿಗಳಿಗೆ ಅಂತಹ ಮಂತ್ರ ಸಿದ್ಧಿಸಿದೆಯೆ?

ಮುದ್ದಣ : ಅದಕ್ಕೆ ತಡೆಯೇನು ?ಭಯವೇನು?

ಮನೋರಮೆ : ನಿನ್ನಲ್ಲು ಆ ಮಂತ್ರ ವಿದೆಯೆ?(ನಿನಗೆ ಆ ಮಂತ್ರ ಸಿದ್ದಿಸಿದೆಯೆ?)

ಮುದ್ದಣ : ನನ್ನಲ್ಲಿ ಆ ಮಂತ್ರ ಹಾಸುಹೊಕ್ಕಾಗಿದೆ

ಮನೋರಮೆ : ಆಹಾ !ನೀನು ಬಲು ಸಮರ್ಥನು. ನಿನಗೆ ಯಾರಿಂದ ಮಂತ್ರದ ಉಪದೇಶವಾಯ್ತು?

ಮುದ್ದಣ : ಗುರುವಿನಿಂದ ಬಾಲ್ಯದಲ್ಲಿಯೇ (ಚಿಕ್ಕವನಿರುವಾಗಲೇ ) ಮಂತ್ರದ ಉಪದೇಶವಾಯಿತು.

ಮನೋರಮೆ :ನನ್ನೊಡೆಯ ! ಅದು ಯಾವ ಮಂತ್ರ ವೆಂದು ನನಗೆ ಹೇಳುವಿರ?

ಮುದ್ದಣ : ಎಲೆ ಹೆಣ್ಣೆ! ನೀನು ಯಾರಲ್ಲಿಯೂ ಎಂದೆಂದಿಗೂ ಹೇಳಬಾರದು ಎಚ್ಚರಿಕೆ!

ಮನೋರಮೆ : ಎಂದು ,ಯಾವತ್ತೂ ಹೇಳುವುದಿಲ್ಲ.

ಮುದ್ದಣ : ಹಾಗಾದರೆ ಅದು ಈ ಮಂತ್ರ .ಕೇಳು …. ಭ....ವ... ಯಾರಲ್ಲಿಯೂ ಹೇಳುವುದಿಲ್ಲ ಎಂದು ಭರವಸೆ ನೀಡು .

ಮನೋರಮೆ: ಇದೋ ಭರವಸೆ ನೀಡುತ್ತೇನೆ.ನಿನ್ನಾಣೆ, ಕುದ್ಯೆವದಾಣೆ ! ಎಂದೂ ಬೇರೆಯವರಿಗೆ ಹೇಳುವುದಿಲ್ಲ.

ಮುದ್ದಣ : ಉಂ! …..ಭವತಿ.....ಭಿ... ನೀನು ಹೇಗೋ ಮರೆತು ಬೇರೆಯವರಿಗೆ ಹೇಳಿ ಗುಟ್ಟನ್ನು ಬಿಟ್ಟುಕೊಟ್ಟರೆ ನಮ್ಮಂತವರ ಬಾಳು ಹಾಳಾಗುವುದು.

ಮನೋರಮೆ : ನಾನೇನು ಮೂಢಳೇ ? ಹೋಗು ! ನನ್ನಾಣೆ ,ಕಣ್ಣಾಣೆ ,ಹೇಳುವುದಿಲ್ಲ.

ಮುದ್ದಣ : (ಜೋರಾಗಿ) 'ಭವತಿ ಭಿಕ್ಷಾಂ ದೇಹಿ' ಎಂಬುದೇ ಕವಿಗಳಿಗೆ ಸಿದ್ಧಿಸಿದ ಹೆಮ್ಮೆಯ ಸಪ್ತಾಕ್ಷರೀ ಮಂತ್ರವು. ಯಾರಲ್ಲಯೂ ಹೇಳಬೇಡ.

ಮನೋರಮೆ : (ಅರೆಮುನಿಸಿನಿಂದ ) ಹೋಗಲಿ ಬಿಡು ರಮಣ ! ನಿನ್ನ ಮಾತನ್ನು ಸಹಜ ನಿಶ್ಚಯ(ನಿಜ)ವೆಂದೇ ತಿಳಿದೆನು.ಈ ರೀತಿಯ ಮಾಟದ ಮೋಸದ ನುಡಿಯ ಕೊಂಕು ಎಂಬುದನ್ನು ಅರಿಯದಾದೆನು .ನೀ ಕವಿಯೋ ,ಹಾಸ್ಯಗಾರನೋ ! ನಿನ್ನ ಈ ಕಾವ್ಯದ ಸೊಬಗನ್ನು ನಮ್ಮಂತಹ ಜಾಣರಲ್ಲದವರು ಕೊಂಡಾಡುವರಲ್ಲದೆ ತಿಳಿದವರು ಒಪ್ಪುವರೇ ?

ಮುದ್ದಣ : ಸಾಕು ಈ ಪರಿಹಾಸವು . ಮುಂದಿನ ಕತೆಯನ್ನು ಕೇಳು .

mamatabhagwat1@gmail.com